# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6)ಪಿ.ಆರ್/ 95 /24-25

ಮುಖ್ಯ ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 31.7.24

## ಕಛೇರಿ ಆದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಫ್-'ಬಿ' ವೃಂದದ ನಗರಯೋಜಕರ ಸಾಮಾನ್ಯ ವರ್ಗಾವಣೆ ಬಗ್ಗೆ.

ಉಲ್ಲೇಖ:
1) ಸರ್ಕಾರದ ಆದೇಶ ಸಂಖ್ಯೆ: ನಅಇ 63 ಎಂ.ಎನ್.ಯು 2023, ದಿ: 04-07-2024
2) ಸಂಖ್ಯೆ: ಬಿ12(5)ಪಿ.ಆರ್/112/24-25, ದಿನಾಂಕ: 20-07-2024ರ ಸುತ್ತೋಲೆ
3) ಮಾನ್ಯ ಮುಖ್ಯ ಆಯುಕ್ತರು ರವರು ಸಂಖ್ಯೆ: ಬಿ12(5)ಪಿ.ಆರ್/112/24-25 ರಲ್ಲಿ ದಿನಾಂಕ: 22-07-2024ರಂದು ಹೊರಡಿಸಿರುವ ಮಾರ್ಗಸೂಚಿಗಳು
4) ದಿನಾಂಕ: 26-07-2024ರಂದು ಸ್ಥಳ ಆಯ್ಕೆ ಸಂಬಂಧ ನಡೆದ ಕೌನ್ಸಿಲಿಂಗ್ ಪ್ರಕ್ರಿಯೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-(1)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದನುಸಾರ ಉಲ್ಲೇಖ-(2)ರ ಸುತ್ತೋಲೆಯಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಫ್-'ಬಿ' ವೃಂದದ ನಗರಯೋಜಕರ ವೃಂದದ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದ್ದು, ಉಲ್ಲೇಖ-(4)ರಂತೆ ನಡೆದ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಕೆಳಕಂಡ ನಗರಯೋಜಕರು ಆಯ್ಕೆ ಮಾಡಿರುವಂತೆ ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳದಲ್ಲಿ ಕಾರ್ಯನಿರ್ವಹಿಸಲು ವರ್ಗಾಯಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಹೆಸರು | ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಕೌನ್ಸಿಲಿಂಗ್ ಮುಖಾಂತರ ಆಯ್ಕೆ ಮಾಡಿಕೊಂಡಿರುವಂತೆ ವರ್ಗಾಯಿಸಿ ನೇಮಿಸಿರುವ ಸ್ಥಳ |
|---|---|---|---|
| 1. | ಶ್ರೀಮತಿ ಸುಷ್ಮಾ ಕೇಶವ ಸಿ | ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ) | ಜಂಟಿ ನಿರ್ದೇಶಕರು (ನಗರಯೋಜನೆ-ದಕ್ಷಿಣ) |

ಮೇಲ್ಕಂಡ ಆದೇಶದನ್ವಯ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು / ಇಲಾಖಾ ಮುಖ್ಯಸ್ಥರುಗಳು ವರ್ಗಾವಣೆಗೊಂಡ ನಗರಯೋಜಕರು ವರ್ಗಾಯಿಸಲಾಗಿರುವ ಸ್ಥಳದಲ್ಲಿ ಕಾರ್ಯನಿರ್ವಹಿಸಲು ಅನುವಾಗುವಂತೆ ಅಗತ್ಯ ಕ್ರಮ ಕೈಗೊಳ್ಳುವುದು.

ಮೇಲ್ಕಂಡ ಆದೇಶವು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

**ಷರತ್ತುಗಳು:-**

1. ಸಾಮಾನ್ಯ ವರ್ಗಾವಣೆಗೊಂಡಿರುವ ನಗರಯೋಜಕರು ಬೇರೆ ಸ್ಥಳಕ್ಕೆ ವರ್ಗಾವಣೆ ಕೋರುವಂತಿಲ್ಲ ಹಾಗೂ ಈ ಆದೇಶವನ್ನು ಪಾಲಿಸದ ಸಂಬಂಧಪಟ್ಟ ಅಭಿಯಂತರರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.
2. ವರ್ಗಾವಣೆ ಪ್ರಕ್ರಿಯೆ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು / ದೂರುಗಳು ಸ್ವೀಕೃತಿಯಾದಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಷರತ್ತಿಗೊಳಪಡಿಸಿದೆ.
3. ಸದರಿ ವರ್ಗಾವಣೆ ಆದೇಶದಲ್ಲಿ ವರ್ಗಾವಣೆಗೊಂಡಿರುವ ನಗರಯೋಜಕರು ವರ್ಗಾವಣೆಗೊಂಡ ಸ್ಥಳದಲ್ಲಿ ವರದಿ ಮಾಡಿಕೊಳ್ಳುವ ಬಗ್ಗೆ ಇಲಾಖಾ ಮುಖ್ಯಸ್ಥರು ಅಗತ್ಯ ಕ್ರಮ ಕೈಗೊಳ್ಳುವುದು.

31.7.24

ಮಾನ್ಯ ಮುಖ್ಯ ಆಯುಕ್ತರು ರವರ
ಆದೇಶದ ಮೇರೆಗೆ)

ವಿಶೇಷ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

30/7/2024 30/7/24

ಪ್ರತಿಯನ್ನು: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಎಲ್ಲಾ ವಲಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಪ್ರಧಾನ ಅಭಿಯಂತರರು ರವರಿಗೆ ಕಳುಹಿಸಿದೆ.
: ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ) ರವರಿಗೆ ಕಳುಹಿಸಿದೆ.

: ಅಪರ ನಿರ್ದೇಶಕರು (ನಗರಯೋಜನೆ) ರವರಿಗೆ ಕಳುಹಿಸಿದೆ.
: ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ) / (ದಕ್ಷಿಣ) ರವರಿಗೆ ಕಳುಹಿಸಿದೆ.
: ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಸಂಬಂಧಪಟ್ಟ ನಗರಯೋಜಕರಿಗೆ / ಕಛೇರಿ ಪ್ರತಿ.